ವಿನ್ಯಾಸಗಳನ್ನು ಬದಲಾಯಿಸಿಕೊಂಡರು. ಮೂರು ವರ್ಷಗಳಲ್ಲಿ ಸುಮಾರು ನೂರೈವತ್ತಕ್ಕೂ ಮಿಕ್ಕಿ ಇಂಗುಗುಂಡಿಗಳು ನಿರ್ಮಾಣವಾದುವು.

ಜಾನುವಾರುಗಳಿಂದ ಸಸಿಗಳನ್ನು ರಕ್ಷಿಸಲು ಬೇಲಿಯ ರಕ್ಷಣೆ ಮಾಡಿದರು. ಬೇಲಿಗೆ ತಾಗಿಕೊಂಡು ಅಗುಳಿನ ರಚನೆ. ಅಗುಳಿನೊಳಗೆ ಅಲ್ಲಲ್ಲಿ ತಡೆಗಟ್ಟ. ಹೀಗಾಗಿ ಮಳೆನೀರು ಪೂರ್ತಿ ಇಂಗುವಂತಾಯಿತು.

ಮೂರೇ ವರ್ಷ. ನೀರಿನ ಪಸೆಯನ್ನು ಮಣ್ಣು ಹಿಡಿದಿಟ್ಟುಕೊಳ್ಳುವ ಧಾರಣ ಶಕ್ತಿಯನ್ನು ಹೆಚ್ಚು ಮಾಡಿಕೊಂಡಿತು. ಗುಡ್ಡದುದ್ದಕ್ಕೂ ಹಾವಸೆ ಕಂಡುಬಂತು. ಅಲ್ಲಲ್ಲಿ ಹುಲ್ಲು ಬೆಳೆಯಿತು. ಇವುಗಳ ಮಧ್ಯೆ ಹಕ್ಕಿಗಳ ಹಿಕ್ಕೆಯಿಂದ ಪ್ರಸಾರವಾದ ವಿವಿಧ ಬೀಜಗಳು ಹುಟ್ಟಿದವು. ನೀರಿನ ಹರಿವು ನಿಂತು ಇಂಗಿದಾಗ ಪಾಚಿ ಬೆಳೆಯುತ್ತದೆ. ಪಾಚಿ ಇದ್ದರೆ ಮಾತ್ರ ಬೀಜಗಳು ಮೊಳಕೆಯೊಡೆಯುತ್ತವೆ ಎನ್ನುವ ಸತ್ಯವನ್ನು ಕಾಡು ನನಗೆ ಕಲಿಸಿತು ಎನ್ನುತ್ತಾರೆ ಸದಾಶಿವ.

## ತರಗಲೆಯ ಹಾಸು

ಯಾವಾಗ ಹಾವಸೆಯು ಮಣ್ಣಿನ ಮೇಲೆ ಬೆಳೆಯಲು ಶುರುವಾಯಿತೋ ಗಿಡಗಳು ನಗಲು ಆರಂಭಿಸಿದುವಂತೆ! ಅರೆ ಜೀವದಲ್ಲಿದ್ದವುಗಳಿಗೆ ಜೀವ ಬಂದುವು. ಬೆಳೆಯುತ್ತಿರುವ ಸಸಿಗಳಿಗೆ ಫಲವತ್ತತೆ ಸಿಕ್ಕಿತು. ಮಣ್ಣಿಗೆ ಚೇತನ ಬಂತು. ಬದಲಾವಣೆಯನ್ನು ಸದಾಶಿವ ಗಮನಿಸುತ್ತಾ ಬಂದರು. ಪ್ರಕೃತಿಯ ಚೋದ್ಯಕ್ಕೆ ಬೆರಗಾದರು.

ಪಕ್ಷಿಗಳ ಹಿಕ್ಕೆಗಳಿಂದ ಆಮದಾದ ಬೀಜಗಳು ಹುಟ್ಟುತ್ತವೆ ಎಂದಾದರೆ ಬೀಜಗಳನ್ನು ಎರಚಿದರೆ ಹುಟ್ಟಲಾರವೇ? ಸ್ಥಳೀಯವಾಗಿ ಸುಲಭವಾಗಿ ಸಿಗುವ ಕಲ್ಮರ, ಕುಂಟಾಲ, ಕಿರಾಲುಬೋಗಿ... ಹೀಗೆ ಕಾಡು ಮರಗಳ ಬೀಜಗಳನ್ನು ಸಂಗ್ರಹಿಸಿದರು. ಮಳೆಗಾಲದ ಮೊದಲು ಎರಚಿದರು. ವರುಷಕ್ಕೆ ಸುಮಾರು ಹತ್ತು ಕಿಲೋದಷ್ಟು ಬೀಜಗಳನ್ನು ಗುಡ್ಡದಲ್ಲಿ 'ಎರಚು ಬಿತ್ತನೆ' ಮಾಡಿದ್ದಾರೆ! ಆಶ್ಚರ್ಯ... ಬಹುಪಾಲು ಬೀಜಗಳು ಮೊಳಕೆಯೊಡೆದು ಸಸಿಗಳಾದಾಗ ಸದಾಶಿವರಿಗೆ ಏನನ್ನೋ ಸಾಧಿಸಿದ ಖುಷಿ.

ಹೀಗೆ ಬೆಳೆದ ಗಿಡಗಳು ಬೆಳೆದಿವೆ, ಮರಗಳಾಗಿವೆ. ಅವುಗಳ ತರಗೆಲೆಗಳು ಬುಡಗಳಲ್ಲಿ ಸಂಗ್ರಹವಾಗುತ್ತಿವೆ. ಮಳೆಗಾಲದಲ್ಲದು 'ಮೆತ್ತಗಿನ ಹಾಸುಗೆ'ಯಾಗಿ ಪರಿವರ್ತನೆಯಾಗುತ್ತಿವೆ. ಇಂತಹ ಹಾಸುಗೆಗಳು ಮಳೆನೀರನ್ನು ಭೂಮಿಯೊಳಗಿಳಿಸುವ ಪಾರಂಪರಿಕ ಮೂಲಗಳು. ಇದರಿಂದಾಗಿ ಮೇಲ್ಮಣ್ಣಿನಲ್ಲಿ ತೇವ ಉಳಿದಿವೆ. ಬೀಜಗಳು ಹುಟ್ಟುವ ಪ್ರಮಾಣ ಹೆಚ್ಚಾಗಿವೆ.

'ಸಹಜವಾಗಿ ಬೆಳೆಯುವ ಕಾಡಿನಲ್ಲಿ ಇಂತಹ ಹಾಸುಗೆಗಳನ್ನು ನಿಸರ್ಗವೇ ಮಾಡಿಡುತ್ತವೆ. ಯಾವಾಗ ಮಾನವನ ಪ್ರವೇಶ ಆಯಿತೋ ನೀರಿನ ಮೂಲಗಳು ನಾಶವಾದುವು. ಮರದ ಬುಡಗಳಲ್ಲಿ ತರಗೆಲೆಯ ಹಾಸುಗೆ ರೂಪುಗೊಳ್ಳಲು ಏನಿಲ್ಲವೆಂದರೂ ಹತ್ತೋ ಹದಿನೈದೋ ವರುಷ ಬೇಕೇ ಬೇಕು. ಗಿಡಗಳಿಗೆ ಬೇರು ಇಳಿಸಲು ಸಹಕಾರಿ.



ಇದು ಕಟ್ಟಿದ ಜೋಕಾಲಿಯಲ್ಲ... ಬೆಳೆದ ಜೋಕಾಲಿ!

ಗುಡ್ಡದಲ್ಲೀಗ ಹಲಸು, ಅಂಟುವಾಳ, ಬೈನೆ, ಕಲ್ಮರ, ಕರಿಮರ, ಚಂದಳಿಕೆ, ಪುನರ್ಪುಳಿ, ಅಂಡಿಪುನಾರ್, ಎರ್ಪೆ... ಹೀಗೆ ನೂರಾರು ಗಿಡಗಳು ತುಂಬಿವೆ' ಎನ್ನುತ್ತಾರೆ.

## ಕಾಡಿಗೆ ಒಯ್ಯುವ ಕತ್ತಿ ಇವರಲ್ಲಿಲ್ಲ!

ಕಾಡಿಗೆ ಹೋಗುವಾಗ ಸದಾಶಿವರ ಕುಟುಂಬ ಕತ್ತಿ ಒಯ್ಯುವುದಿಲ್ಲ! ಸ್ವಲ್ಪ ಪ್ರಮಾಣದಲ್ಲಿ ತರಗೆಲೆಗಳನ್ನು ಆಯುವುದನ್ನು ಬಿಟ್ಟರೆ ಬೇರೇನೂ ಅಲ್ಲಿಂದ ತರುವುದೂ ಇಲ್ಲ. ಸಹಜ ಕಾಡಾಗಿ ಬೆಳೆದಿದೆ. ಅಲ್ಲಿ ಸಂಚರಿಸುವಾಗಲೂ ಸರಾಗವಾಗಿ ನಡೆಯಲು ಕಷ್ಟವಾಗುವಷ್ಟು ದಟ್ಟವಾಗಿದೆ. ನೆರಳಿನ ಪ್ರಮಾಣ ಗಾಢವಾಗಿರುವುದರಿಂದ ಕೆಲವೊಂದು ಸಸ್ಯಗಳ ಬೆಳವಣಿಗೆಯು ಕುಂಠಿತವಾಗಿರುವುದರನ್ನು ಗಮನಿಸಿದ್ದಾರೆ.

'ಗಿಡಗಳಿಗೆ ಸರಿಯಾಗಿ ಬಿಸಿಲು ಬಿದ್ದರೆ ಮಾತ್ರ ಹುಲುಸಾಗಿ ಬೆಳೆಯುತ್ತವೆ. ಈಗ ನೆರಳಿರುವುದರಿಂದ ಬಿಸಿಲು ನೆಲ ಸೋಕುವುದು ಕಡಿಮೆ. ಮರಗಳು ಬಿಸಿಲನ್ನು ಹುಡುಕಿಕೊಂಡು ಎತ್ತರಕ್ಕೆ ಬೆಳೆಯುತ್ತಾ ಹೋಗುತ್ತವೆ. ಇಂತಹ ಮರಗಳು ಟಿಂಬರಿಗೆ ಸಿದ್ಧವಾಗುವಾಗ ನೂರು ವರುಷ ಬೇಕೇನೋ!' ಎನ್ನುತ್ತಾ ಒಂದು ಮರದತ್ತ ಗಮನ ಸೆಳೆದರು. 'ಇದು ಪಲ್ಲೆ ಬಳ್ಳಿ. ಅಂಕುಡೊಂಕಾಗಿ, ಬಾಗಿಬಳುಕುತ್ತಾ ಎತ್ತರಕ್ಕೆ ಬೆಳೆದಿದೆ. ಇದರ ಬೇರುಗಳು ಸದೃಢವಾಗಿದ್ದು ನೆಲದ ಮೇಲೆಯೇ ಹರಡಿರುವುದರಿಂದ ಮಣ್ಣಿನ ಸವಕಳಿ ತಪ್ಪಿದೆ' ಎಂದರು.

ಕಾಡಿನಲ್ಲಿ ಪಕ್ಷಿ ವೈವಿಧ್ಯಗಳ ಸಂಖ್ಯೆ ಅಧಿಕವಾಗಿದೆ. ಈ ಭಾಗಕ್ಕೆ ಪರಿಚಿತವಾದ ಹಕ್ಕಿಗಳ ಸಂಸಾರಗಳಿವೆ. ಮಂಗ, ನವಿಲಿನ ಕಾಟ ಜಾಸ್ತಿ! ನಮ್ಮ ಜೀವ ಉಳಿಸಲು ನೀರು ಬೇಕೇ ಬೇಕಲ್ವಾ? ಹಾಗಾಗಿ ಇವುಗಳ ಉಪಟಳವನ್ನು ಸಹಿಸಲೇಬೇಕು. 'ನೀರಿಲ್ಲದೆ ಬದುಕುವ ಕಷ್ಟಕ್ಕಿಂತ ಈ ಕಷ್ಟ ದೊಡ್ಡದಲ್ಲ'. ಎನ್ನುತ್ತಾರೆ. ಈಗ ನೀರಿಂಗಿಸುವ ಕೆಲಸವನ್ನು ಕಾಡು ಮಾಡುತ್ತಿದೆ.

ಕರಾವಳಿಗೆ ನೀರಿನ ಬರ ಇಲ್ಲ ಎನ್ನುವುದು ಹಳೆಯ ಮಾತು. ಈಗ ಹಾಗಲ್ಲ. ಸದಾಶಿವ ತಮ್ಮೂರಿನ ಉದಾಹರಣೆಯನ್ನೇ ಹೇಳುತ್ತಾರೆ – ಕಳೆದೆರಡು ವರ್ಷಗಳಲ್ಲಿ ಇನ್ನೂರಕ್ಕೂ ಮಿಕ್ಕಿ ಕೊಳವೆ ಬಾವಿಗಳನ್ನು ಕೊರೆಯುವ ಕೊರೆಯಂತ್ರದ ಸದ್ದನ್ನು ಕೇಳಿದ್ದೇನೆ. ಏನಿಲ್ಲವೆಂದರೂ ಏಳುನೂರೈವತ್ತು ಅಡಿವರೆಗೂ ಕೊರೆತವಾಗಿದೆ. ಇದು ಒಂದು ಹಳ್ಳಿಯ ಕತೆ. ಇಂತಹ ನೂರಾರು, ಅಲ್ಲ, ಸಾವಿರಾರು ಹಳ್ಳಿಗಳ ಕತೆ ಮತ್ತು ವ್ಯಥೆಗಳಲ್ಲಿ ವ್ಯತ್ಯಾಸವಿಲ್ಲ. ಮತ್ತೆ ನೀರಿನ ಬರ ಬಾರದೆ ಇದ್ದೀತೇ? ಸದಾಶಿವರ ಮಾತಿನಲ್ಲಿ ಭವಿಷ್ಯದ ವಿಷಾದ ಚಿತ್ರವು ಕಣ್ಣು ಮಿಟುಕಿಸಿ ಮರೆಯಾಯಿತು!

ಸದಾಶಿವರಂತೆ ಅಲ್ಲಲ್ಲಿ ಕಾಡನ್ನು ಬೆಳೆಸಿದ ಕೃಷಿಕರಿದ್ದಾರೆ. ಒಬ್ಬೊಬ್ಬರಲ್ಲಿ ಒಂದೊಂದು ಅನುಭವ. ಇಂದು ಹಸಿರಿನ ಮಾತುಗಳು ಪೇಲವವಾಗುತ್ತಿರುವ ಕಾಲಘಟ್ಟದಲ್ಲಿ ಹಸಿರನ್ನು ಸದ್ದಿಲ್ಲದೆ ಎಬ್ಬಿಸುತ್ತಿರುವ ಕೃಷಿಕರ ಸಾಧನೆ ದಾಖಲಾಗಬೇಕು.

ಸದಾಶಿವರ ಸಂಪರ್ಕ: ಎ.ಪಿ. ಸದಾಶಿವ ಮರಿಕೆ,
ಮರಿಕೆ ಮನೆ, ಅಂಚೆ: ಆರ್ಯಾಪು, ಪುತ್ತೂರು
ತಾಲ್ಲೂಕು, ದಕ್ಷಿಣ ಕನ್ನಡ.
ಫೋನ್: 94492 82892.